<u>**ಓ.ಎಸ್.ನಂ.364/2014**</u>

ದಿನಾಂಕ:**26-04-2018** ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು

ಪಿ.ಡಬ್ಲ್ಯು:1

<u>ಪಾಟೀ ಸವಾಲು:- ಶ್ರೀ ಎಂ ಎಂ ವಕೀಲರಿಂದ:</u>

ದಾವೆಯನ್ನು ತೋಟಗಾರಿಕೆ ಇಲಾಖೆಯವರು ರತ್ನಮ್ಮರವರ ವಿರುದ್ಧ ಸಲ್ಲಿಸಿದ್ದಾರೆ. ಪ್ರತಿವಾದಿ ದಾವಾ ಆಸ್ತಿಯನ್ನು ಒತ್ತುವರಿ ಮಾಡಿರುವ ಕಾರಣ ಈ ದಾವೆಯನ್ನು ಸಲ್ಲಿಸಲಾಗಿದೆ. ದಾವಾ ಆಸ್ತಿ ನಮ್ಮ ಇಲಾಖೆಗೆ **1977** ರಲ್ಲಿ ಮಂಜೂರಾಗಿರುತ್ತದೆ. ಮಂಜೂರು ಮಾಡುವ ಸಂದರ್ಭದಲ್ಲಿ ದಾವಾ ಆಸ್ತಿಯ ಸರ್ವೇನಂಬರ್.**784** ಇದ್ದು, ಈ ಹೊಸ ಸರ್ವೆರ್‌ನಂಬರ್.**149** ಪಿ ಇರುತ್ತದೆ. ಸರ್ವೆರ್‌ನಂಬರ್.**149** ರಲ್ಲಿ ಒಟ್ಟು **345** ಎಕರೆ ಇದ್ದು, ಅದರ ಪೈಕಿ ನೂರು ಎಕರೆ ನಮ್ಮ ಇಲಾಖೆಗೆ ಸೇರಿದ್ದು ಉಳಿದದ್ದು ಅರಣ್ಯ ಇಲಾಖೆಗೆ ಸೇರಿರುತ್ತದೆ. ದಾವಾ ಆಸ್ತಿಯ ಸರ್ವೆರ್‌ನಂಬರ್ಗೆ ಸಂಬಂಧಿಸಿದಂತೆ ಇದೂವರೆಗೂ ಹದ್ದುಬಸ್ತ್ ಆಗಿಲ್ಲ ಅಂದರೆ ಸಾಕ್ಷಿ ನಮ್ಮ ಇಲಾಖೆಗೆ ಸೇರಿದ ಆಸ್ತಿ ಹದ್ದುಬಸ್ತ್ ಆಗಿದೆ ಎಂದು ನುಡಿಯುತ್ತಾರೆ. ಹದ್ದುಬಸ್ತ್ ಯಾವ ಸಾಲಿನಲ್ಲಿ ಆಗಿದೆ ಎಂದು ನನಗೆ ನೆನಪಿಲ್ಲ. ಹದ್ದುಬಸ್ತ್ ಆದ ಬಗ್ಗೆ ನ್ಯಾಯಾಲಯಕ್ಕೆ ದಾಖಲೆಯನ್ನು ಹಾಜರುಪಡಿಸಿಲ್ಲ ಅಂದರೆ ಸರಿ. ನಮಗೆ ಮಂಜೂರಾದ ಸ್ಥಳ ಎಲ್ಲಿದೆ ಎಂಬುದು ನಮಗೆ ಗೊತ್ತಿಲ್ಲ ಅಂದರೆ ಸರಿಯಲ್ಲ ಮತ್ತು ಸದರಿ ಜಾಗದಲ್ಲಿ ನಾವು ಸ್ವಾಧೀನದಲ್ಲಿ ಇಲ್ಲ ಅಂದರೆ ಸರಿಯಲ್ಲ. ಪ್ರತಿವಾದಿ **4** ಎಕರೆ **38** ಗುಂಟೆ ಜಾಗದಲ್ಲಿ ಸ್ವಾಧೀನದಲ್ಲಿದ್ದಾರೆ. ಅವರು ಯಾವಾಗಿನಿಂದ ಸ್ವಾಧೀನದಲ್ಲಿದ್ದಾರೆ ಎಂಬುದು ನನಗೆ ಗೊತ್ತಿಲ್ಲ. ಪ್ರತಿವಾದಿ ಸುಮಾರು **40** ವರ್ಷಗಳಿಂದ ದಾವಾ ಆಸ್ತಿಯ ಸ್ವಾಧೀನದಲ್ಲಿದ್ದಾರೆ ಅಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ನಮಗೆ ಮಂಜೂರಾದ ಆಸ್ತಿಯ ಖಾತೆ ಇದೂವರೆಗೂ ನಮ್ಮ ಇಲಾಖೆಗೆ ಹೆಸರಿಗೆ ಆಗಿಲ್ಲ ಅಂದರೆ ಸಾಕ್ಷಿ ಖಾತೆ ಆಗಿದೆ ಎಂದು ನುಡಿಯುತ್ತಾರೆ. ಖಾತೆ ಬದಲಾವಣೆಯಾದ ಇಸವಿ ನನಗೆ ಗೊತ್ತಿಲ್ಲ.

ಅಸಲು ದಾವಾ ಸಂಖ್ಯೆ.**456/2000** ದಾವೆಯಲ್ಲಿ ಪ್ರತಿವಾದಿಗೆ ಶಾಶ್ವತ ಪ್ರತಿಬಂದಕಾಜ್ಞೆ ಆದೇಶ ಆಗಿದೆ ಅಂದರೆ, ಸಾಕ್ಷಿ ಕಾನೂನು ಕ್ರಮ ಜರುಗಿಸುವ ಮೂಲಕ ಅವರನ್ನು ಖಾಲಿ ಮಾಡಿಸಲು ಆದೇಶವಾಗಿದೆ ಎಂದು ನುಡಿಯುತ್ತಾರೆ. ಸದರಿ ಆದೇಶದ ವಿರುದ್ಧ ನಾವು ಮೇಲ್ಮನವಿಯನ್ನು ಸಲ್ಲಿಸಿಲ್ಲ ಅಂದರೆ ಸರಿಯಲ್ಲ. ಉಚ್ಚ ನ್ಯಾಯಾಲಯದ ರಿಟ್ ಅರ್ಜಿ ಸಂಖ್ಯೆ.**33643** ಮತ್ತು **33748/2000** ದ ಪ್ರಕಾರ ಮಾಡಲಾದ ಆದೇಶದ ಬಗ್ಗೆ ನನಗೆ ಮಾಹಿತಿ ಇರುತ್ತದೆ. ಸದರಿ ಆದೇಶದ ಪ್ರಕಾರ ಬಗರ್ ಹುಕುಂ ಮುಂದೆ ಪ್ರಕರಣ ಇತ್ಯರ್ಥಪಡಿಸಿಕೊಳ್ಳಬೇಕು ಎಂದು ಆದೇಶ ಆಗಿದೆ ಅಂದರೆ ಸರಿ. ಬಗರ್ ಹುಕುಂ ಸಮೀತಿಯವರು ಪ್ರತಿವಾದಿಯ ಸ್ವಾಧೀನವನ್ನು ಗಮನಿಸಿ ಆಕೆಗೆ ಆಸ್ತಿಯನ್ನು ಮಂಜೂರು ಮಾಡುವ ಸಲುವಾಗಿ ಪ್ರಸ್ತಾವನೆಯನ್ನು ಸರ್ಕಾರಕ್ಕೆ ಸಲ್ಲಿಸಲಾಗಿದೆ ಅಂದರೆ ಸರಿ. ನಿಪಿ-೩ ರಲ್ಲಿ ದಾವಾ ಆಸ್ತಿಯ ವಿಸ್ತೀರ್ಣವನ್ನು ಸೇರಿ ಖಾತೆ ಮಾಡಲಾಗಿದ್ದು, ದಾವಾ ಆಸ್ತಿಯ ವಿಸ್ತೀರ್ಣವನ್ನು ಕೈಬಿಟ್ಟು ಖಾತೆ ಮಾಡಬೇಕಾಗಿತ್ತು ಎಂದು ತಹಶೀಲ್ದಾರ್ ಹಿಂಬರಹವನ್ನು ನೀಡಿದ್ದಾರೆ ಅಂದರೆ ಸರಿಯಲ್ಲ. ನಮಗೆ ಮಂಜೂರಾದ ಖಾತೆ ಇದೂವರೆಗೂ ಆಗಿಲ್ಲ ಅಂದರೆ ಸರಿಯಲ್ಲ. ಅಸಲು ದಾವಾ ಸಂಖ್ಯೆ.**456/2000** ದ ತೀರ್ಪಿನ ವಿರುದ್ಧ ನಾವು ಮೇಲ್ಮನವಿಯನ್ನು ಸಲ್ಲಿಸಿಲ್ಲ ಅಂದರೆ ಸರಿಯಲ್ಲ ಮತ್ತು ಈ ದಾವೆಯನ್ನು ಪ್ರತಿವಾದಿಯರಿಗೆ ತೊಂದರೆ ಕೊಡುವ ಸಲುವಾಗಿ

ಹೂಡಲಾಗಿದೆ ಅಂದರೆ ಸರಿಯಲ್ಲ. ಉಚ್ಚ ನ್ಯಾಯಾಲಯದ ರಿಟ್ ಅರ್ಜಿಯ ತೀರ್ಪಿನ ವಿರುದ್ಧ ಮೇಲ್ಮನವಿಯನ್ನು ಸಲ್ಲಿಸಿಲ್ಲ ಅಂದರೆ ಸರಿಯಲ್ಲ. ಈ ಬಗ್ಗೆ ನಾನು ನ್ಯಾಯಾಲಯಕ್ಕೆ ದಾಖಲೆಗಳನ್ನು ಹಾಜರುಪಡಿಸಿಲ್ಲ ಅಂದರೆ ಸರಿಯಲ್ಲ. ಯಾವುದೇ ದಾಖಲೆಯನ್ನು ಹಾಜರುಪಡಿಸದೇ ಇದ್ದರೂ ದಾಖಲೆಯನ್ನು ಹಾಜರುಪಡಿಸಿದ್ದೇನೆ ಎಂದು ಸುಳ್ಳು ಸಾಕ್ಷ್ಯವನ್ನು ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ. ಸರ್ಕಾರದ ಮುಂದೆ ಪ್ರತಿವಾದಿಗೆ ದಾವಾ ಆಸ್ತಿಯನ್ನು ಮಂಜೂರು ಮಾಡುವ ಪ್ರಸ್ತಾವನೆ ಚಾಲ್ತಿಯಲ್ಲಿರುವುದರಿಂದ ಪ್ರತಿವಾದಿಗೆ ತೊಂದರೆ ಕೊಡುವ ಸಲುವಾಗಿ ನಾನು ಈ ದಾವೆಯನ್ನು ಸಲ್ಲಿಸಿದ್ದೇನೆ ಅಂದರೆ ಸರಿಯಲ್ಲ. ನಿಪಿ-೧ ರಿಂದ ನಿಪಿ-೬ ನ್ನು ಈ ದಾವೆಗಾಗಿ ಸೃಷ್ಟಿ ಮಾಡಿದ ದಾಖಲೆ ಅಂದರೆ ಸರಿಯಲ್ಲ.

ಮರು ವಿಚಾರಣೆಃ ಇರುವುದಿಲ್ಲ.

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಇ ಎ ಒ

( ಸಿ.ಎನ್.ಚಂದನ್ )

2ನೇ.ಹೆಃಪ್ರಃದಃನ್ಯಾಃದಂ.,ರವರು,

ಕಡೂರು.